ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 21 ನೇ ಸೆಪ್ಟೆಂಬರ್, 2020

ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ಅನುದಾನ ನೀಡಿರುವ ಕುರಿತು

ಶ್ರೀ ಕೆ. ಪಿ. ನಂಜುಂಡಿ ವಿಶ್ವಕರ್ಮ(ವಿಧಾನಸಭೆಯಿಂದ ಚುನಾಯಿತರಾದವರು) -

67 (59) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಕರ್ನಾಟಕ ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ನಿಗಮಕ್ಕೆ ನೀಡಲಾದ ಅನುದಾನವೆಷ್ಟು; (ವರ್ಷವಾರು ವಿವರ ನೀಡುವುದು)

(ಆ) 2020-2021ನೇ ಸಾಲಿನ ಆಯವ್ಯಯದಲ್ಲಿ 25 ಕೋಟಿಗಳ ಅನುದಾನ ನಿಗದಿಯಾಗಿದ್ದು, ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನವೆಷ್ಟು;

(ಇ) ಕಳೆದ 3 ವರ್ಷಗಳಲ್ಲಿ ನಿಗಮದ ಸೌಲಭ್ಯ ಕೋರಿ ಸ್ವೀಕೃತಿಗೊಂಡ ಅರ್ಜಿಗಳೆಷ್ಟು; ಮಂಜೂರಾದ ಅರ್ಜಿಗಳೆಷ್ಟು; ಬಾಕಿ ಉಳಿದಿರುವ ಅರ್ಜಿಗಳೆಷ್ಟು?